136(2)

Regd No BG 155

— ಶ್ರೀ —

12—4—1962

Sri "SATYAVADI"
— DAILY —
MYSORE4
46 th Year

ಸತ್ಯವಾದಿ
SATYAVADI

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು- ಆರಮನೆ ಸಿಂಸ್ಥೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಭೂ ಶಾಸನದಿಂದ ಹತ್ತು ಲಕ್ಷ ಎಕರೆ ಸಿಗುವುದು

ರಾಜ್ಯಗಳು ಅಂಗೀಕರಿಸಿರುವ ಭೂ ಮಿತಿ ಕಾನೂನುಗಳು ಸರಿಯಾಗಿ ಜಾರಿ ಆದರೆ ಭೂಮಿ ಇಲ್ಲದವರಿಗೆ 10 ಲಕ್ಷ ಎಕರೆ ಭೂಮಿ ಸಿಗುವುದಾಗಿ ಯೋಜನಾ ಸಮಿತಿ ಸದಸ್ಯ ಶ್ರೀ ಶ್ರೀಮನ್ ನಾರಾಯಣರು ನಿನ್ನೆ ಪಾಟ್ನಾದಲ್ಲಿ ತಿಳಿಸಿದರು

ಮಂತ್ರಿಮಂಡಲದ ವಿಸ್ತರಣೆ ಇಲ್ಲ

ಶ್ರೀ ಎಸ್. ಆರ್. ಕಾಂತಿಯವರ ನೇತೃತ್ವದ ಮಂತ್ರಿಮಂಡಲದ ವಿಸ್ತರಣೆ ಆಗುವುದಿಲ್ಲವೆಂದು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪ ನಿನ್ನೆ ಬೆಂಗಳೂರಿನಲ್ಲಿ ಸ್ಪಷ್ಟವಾಗಿ ತಿಳಿಸಿದರು. ಮುಂದಿನ ಎರಡುಮೂರು ತಿಂಗಳುಗಳ ವರೆಗೆ ಮಂತ್ರಿಮಂಡಲ ವಿಸ್ತರಣೆ ಆಗುವ ದೆಂಬುದನ್ನು ಅವರು ನಿರಾಕರಿಸಿದರು ವಿಧಾನ ಸಭೆಗೆ ಶ್ರೀ ಎಸ್. ನಿಜಲಿಂಗಪ್ಪ ನವರು ಪ್ರವೇಶಕ್ಕೆ ಯಾವ ನಿರ್ಬಂಧವು ಇಲ್ಲವೆಂದ ಮಧ್ಯ ಪ್ರದೇಶದ ಡಾ|| ಕೈಲಾಸನಾಥ ಖಟಜುಂವಂ ನಿದರ್ಶನವ ನ್ನೆತ್ತಿರು.

ದಾಸಪ್ಪನವರಿಗೆ ಮಂತ್ರಿ ಪದವಿ ?

ಕೇಂದ್ರ ಮಂತ್ರಿ ಮಂಡಲವನ್ನು ಶ್ರೀ ವಸೂಭ್ಯಾ ಪಾಟೀ ಸೇರುವರೆಂದು ನಪ್ರದೆಹಲಿ ವಾರ್ತೆ ತಿಳಿಸುತ್ತದೆ ಅವರಿಗೆ ಅಂತರರಾಷ್ಟ್ರೀಯ ವಾಣಿಜ್ಯ ಖಾತೆಯನ್ನು ಕೊಟ್ಟೆಂದ. ಶ್ರೀ ಬಿ ಎ. ದಾತಾರರು ಗೃಹಶಾಖೆಯ ಮಂತ್ರಿಗಳಾಗುವ ಸಂಭವವಿದೆ ಶ್ರೀಗಳಾದ ಹೆಚ್. ಸಿ ದಾಸಪ್ಪ, ಡಾ|| ರಾವ ಸುಬಾಗ ಸಿಂಗ್, ಓ ವಿ ಅಲಗೇಷ್, ಶ್ರೀಮತಿ ಮಂಗಳಂ ಪಾಂಡಿ ಹೆಸರೂ ಇವರು ಮಂತ್ರಿಗಳಾ ಗುವ ಸಾಧ್ಯತೆ ಇದೆ ಎಂದ ನವದೆಹಲಿ ವಾರ್ತೆ. ಪ್ರಸ್ತಾವಣೆ ಆಗಿರುವ ಮಾಜಿ ಆ ಮಂತ್ರಿಗಳ ಪೈಕಿ ಹೆಚ್ಚು ಮಂದಿ ಯುವ ಉಪಮಂತ್ರಿಗಳಾಗಿ ಸೇವೆ ಮಾಡುವ ನಿರೀಕ್ಷೆ ಇದೆ.

ತಾರಾ ಪ್ರಭಾವ

ಪಿಂಪ್ರಿ ಬಳಿ ಇರುವ ಸ್ಟೆ ಪ್ಲೋಮೈ ಸಿ ಕಾರ್ಖಾನೆ ಉದ್ಘಾಟನೆಗೆ ಪಂ|| ನೆಹರು ಬೊಂಬಾಯಿಗೆ ಆಗಮಿಸಿದ್ದಾಗ ಸಿನಿಮಾ ನಟನಟಿಯರು ಅವರನ್ನು ಸಂದ ರ್ಶಿಸಿ, ವಾರ್ತಾ ಹಾಗೂ ಪ್ರಸಾರ ಶಾಖೆಯನ್ನು ಕ್ಯಾಬಿನೆಟ್ ಮಟ್ಟಕ್ಕೆ ತರ ಬೇಕೆಂದು ಪ್ರಾರ್ಥಿಸಿದ್ದರು ಕ್ಯಾಬಿ ನೆಟ್‌ಗೆ ಚಿತ್ರೋದ್ಯಮ ಪೂರ್ಣವಾಗಿ ಗೊತ್ತಾಗದ್ದರಿಂದ ಆ ಉದ್ಯಮ ಕಷ್ಟ ಕ್ಕೀಡಾಗಿದೆ ಎಂದು ಅವರು ತಿಳಿಸಿದ್ದರು ಈಗ ಅದು ಕ್ಯಾಬಿನೆಟ್ ಮಟ್ಟಕ್ಕೆ ಬಂದಿರುವದು

★

ಮೂರುಲಕ್ಷ ಕಿಲೋವಾಟಿನ ಪಂಬಕ್ಕಿ (ಪಲಂಗಿರಿ) ಹೈಡ್ರೋ — ಎಲೆಕ್ಟ್ರಿಕ್ ಪ್ರಾಜೆಕ್ಟಿಗೆ ಆಗುವ ಅಂದಾಜಿನ ಇಡೀ ವೆಚ್ಚ ರೂ 25 ಕೋಟಿಗಳಷ್ಟನ್ನು ಅವೆರಿಕ ಕೊಡುವದೆಂದು ನಿನ್ನೆ ತಿರುವೇಂದ್ರಂನಲ್ಲಿ ಅಮೆರಿಕಾ ರಾಯಭಾರಿ ಗಾಲ್ಬ್ರೈತ್‌ರು ತಿರುವೇಂದ್ರಂನಲ್ಲಿ ತಿಳಿಸಿದರು.

ಗೋರಕ್ಷಣೆಯಲ್ಲಿ ತೊಡಗಿದ್ದ ಸಮಾಜವಾದಿ ಕಾರ್ಯಕರ್ತರ ಪತ್ನೀಯನ್ನು ಉತ್ತರ ಪ್ರದೇಶದ ಮುಂತಿ ಮೇರ್ತಡಲವನ್ನು ವಿಸರ್ಜನೆ ಮಾಡುವಂತೆ ಅಲ್ಲಿನ ರಾಜ್ಯ ಪಾಲರನ್ನು ಪ್ರಾರ್ಥಿಸಿದೆ

ಖಟಮಂಡುವಿನಲ್ಲಿರುವ ಟೈಂಸ್ ಆಫ್ ಇಂಡಿಯಾ ಪತ್ರಿಕಾ ಕಾರರು ಮಾಡಿದ ದಿನಗಳಲ್ಲಿ ನೇಪಾಳವನ್ನು ಬಿಟ್ಟುಹೋಗು ವರೆಗೆ ನಿನ್ನೆ ಅಜ್ಞೆ ಆಯಿತು

ಭಾಗಲ್ಪುರ ಜಿಲ್ಲೆಯ ಫೋಗಾ ಬಳಿ ಗಂಗಾ ನದಿಯ ಮಧ್ಯದಲ್ಲಿ 50 ಜನರಿದ್ದ ನಾಡ ದೋಣಿ ಸೋಮವಾರ ರಾತ್ರಿ ಮುಳುಗಿ ಸುಮಾರು 20 ಜನರು ಜಲ ಸಮಾಧಿ ಆದರೆಂಬ ಭೀತಿ ಇರುವದಾಗಿ ಪಾಟ್ನಾ ವಾರ್ತೆಯ.

ಕರಾಚಿಯಿಂದ ಬಂದಿರುವ ವಾರ್ತೆ ಪ್ರಕಾರ ಕೇಂದ್ರ ಒಪ್ಪಂದ ಸಂಸ್ಥೆಗೂ ಪಾಕಿಸ್ತಾನಕ್ಕೂ ವಿಷಯವಾದ ಭಿನ್ನಾಭಿಪ್ರಾಯ ಉಂಟಾಗಿದೆ.

ವಿವಿಧ ವಿಷಯಗಳು

ಮೈಸೂರು ರಾಜ್ಯದಲ್ಲಿ ಸೀಮೆಂಟು ಕಾರ್ಖಾನೆ ಸ್ಥಾಪನೆಯ ಕೆಲಸ ಕಾರ್ಯಪೂರ್ಣವಾಗಿದೆ ಜೂನಿನಿಂದ ಆದು ಸಿಮೆಂಟಿನ ಉತ್ಪಾದನೆ ಆರಂಭಿಸುವದು. ವರ್ಷಕ್ಕೆ ಮೂರು ಲಕ್ಷ ಟನ್ನುಗಳ-ಸೀಮೆಂಟು ಉತ್ಪಾದನೆ ಆಗುವದು

ಶಿವಮೊಗ್ಗಾದಲ್ಲಿ ಸೇರಿದ್ದ ಹಿಂದೂ ಮಹಾಸಭೆ ಕಾರ್ಯಕರ್ತರ ಸಭೆ, ವಿಧಾನ ಸಭೆಯಲ್ಲಿ ಇತ್ತೀಚೆಗೆ ರಾಜ್ಯಪಾಲರವರ ಭಾಷಣವನ್ನು ತುಳಿದ -ಶ್ರೀ ಬಿ. ಗೋಪಾಲಗೌಡನ್ನು ಖಂಡಿಸಿತು ಕೇರಳದ ಭೂಮಸೂದೆ ಬಗ್ಗೆ ಸುಪ್ರೀಂ ಕೋರ್ಟು ತೀರ್ಪಿತ್ತಿರುವದನ್ನು ಗಮನಿಸಿ ಭೂಸುಧಾರಣೆ ಕಾನೂನನ್ನು ತಿದ್ದುಪಡಿ ಮಾಡಬೇಕೆಂದು ಸಭೆ ನಿರ್ಣಯವನ್ನು ಅಂಗೀಕರಿಸಿತು ಶಾಸನದ ಮೂಲಕ ಗೋವಧೆ ನಿಲ್ಲಿಸಬೇಕೆಂಬ ಮತ್ತೊಂದು ನಿರ್ಣಯ ಅಂಗೀಕೃತವಾಯಿತು

ಪಂಜಾಬಿನ ಮುಖ್ಯ ಮಂತ್ರಿ ಶ್ರೀ ಪ್ರತಾಪಸಿಂಗ್ ಕೈರಾನರ ಉಪ್ಪಿಯ ಕ್ಷಮಬದ್ಧತೆಯನ್ನು ಪ್ರಶ್ನಿಸಿ, ಪರಾಜಿತರಾದ ಅಕಾಲಿ ಉಮೇದವಾರ ಮಗ ಶ್ರೀ ಲಭಾ ಸಿಂಗ್ ಟರ್ಕ್ ಜುನಾವಣೆ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದಾರೆ ಕೈರಾನಂ 34 ಹೆಚ್ಚು ಮತಗಳಿಂದ ವಿಧಾನ ಸಭೆಗೆ ಆಯ್ಕೆ ಆಗಿದ್ದರು.

ಕೋಲ್ಕತ್ತಾದಲ್ಲಿ ಆರು ದಿವಸಗಳಲ್ಲಿ 16 ಅಸ್ವಾಭಾವಿಕ ಸಾವಾಗಿವೆ. ವಿಷವಿಶ್ರ ಆಹಾರ ಸಂಬಂಧಪಟ್ಟಂತೆ ಆರು ಸಾವುಗಳು, ನೀರಿನಲ್ಲಿ ಮುಳುಗಿ ನಾಲ್ಕು ಸಾವುಗಳು ಕೊಲೆಯಿಂದ ಎರಡು ಸಾವುಗಳು ಮತ್ತು ಆತ್ಮಹತ್ಯೆಯಿಂದ ಎರಡು ಸಾವುಗಳು ಆಗಿವೆ.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕುಮಾರ್ ಜೋಯಿಸರಿಂದ

13 ನವಮಿ ಪುಷ್ಯ

ಲೋಕಸಹಾಯಕ ಸೇನಾ ಶಿಬಿರ

ಮೈಸೂರು 11— ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ಈ ತಿಂಗಳು ತಾ|| 16 ರಿಂದ ಮೇ 15 ರವರೆಗೆ ಲೋಕಸಹಾಯಕ ಸೇನಾ ಶಿಬಿರವು ನಡೆಯುವುದಷ್ಟೆ : ಹುಣಸೂರು ಪುರಸಭಾ ಪ್ರೌಢಶಾಲೆಯ ಆವರಣದಲ್ಲಿ ಇದೇ 14 ರಿಂದ ಉಮೇದುವಾರಿಕೆಯನ್ನು ಶಿಬಿರಕ್ಕೆ ಸೇರಿಸಿಕೊಳ್ಳುವ ಕಾರ್ಯ ಆರಂಭವಾಗುವುದು ತಂಬೇತಿ ಸಮಯದಲ್ಲಿ ಶಿಕ್ಷಣಾರ್ಥಿಗಳಿಗೆ ಉಚಿತ ಸಮವಸ್ತ್ರ, ಭೋಜನ, ವಸತಿ ಮತ್ತು ಔಷಧೋಪಚಾರ ಸೌಲಭ್ಯಗಳು ದೊರೆಯುವುದಲ್ಲದೆ ಪ್ರತಿಯೊಬ್ಬ ಶಿಕ್ಷಣಾರ್ಥಿಗೆ ರೂ 15 ಭತ್ತೆ ಕೊಡಲಾಗುವುದು — ಶಿಕ್ಷಣ ಪಡೆದವರು ಸೈನ್ಯವನ್ನು ಸೇರಬೇಕೆಂಬ ನಿರ್ಬಂಧನೆಯೂ ಇಲ್ಲ.

೦೦೦೦

ಯು ಗಾ ದಿ

ವೈದ್ಯಗುರು ಎಂ ಆರ್ ಭಟ್ ರವರು ಯುಗಾದಿ ಕುರಿತ ಕೆಲ ವಿವರಣೆಗಳನ್ನು, ಮಂಗಳೂರು ಕೆನರಾ ಹೈಸ್ಕೂಲಿನಲ್ಲಿ ಯುಗಾದಿ ಹಬ್ಬದ ಸಪ್ತಾರಂಭದಲ್ಲಿ ಮಾಡಿದ ಭಾಷಣದಲ್ಲಿ ಈರೀತಿ ತಿಳಿಸಿದರು— ಯುಗಾದಿ ಎಂಬುದನ್ನು ವಾಡಿಕೆಯಾಗಿ ನಾವು ಕರೆಯುತ್ತಿದ್ದೇವೆ ; ಸೃಷ್ಟಿಯು ಆನಂದಮಯವಾಗಿರುವ ಋತುಗಳಾರಂಭ ವಿಸಂತರುತು ಇಂದು ಆರಂಭವಾಗುತ್ತದೆ ; ಸಮಸ್ತ ಪೂನವಕುಲ ವಲ್ಲದೆ ಮೃಗ ಪಕ್ಷಿಗಳು ಕೂಡ ಈ ಋತುವಿನಲ್ಲಿ ಸಂತೋಷದಿಂದಿರುತ್ತವೆ, ಶ್ರೀ ಕೃಷ್ಣನೇ ಗೀತೆಯಲ್ಲಿ ತಾನು ' ಋತೂನಾಂ ಕುಸುಮಾಕರ ' ಎಂದಿರುವನು.

೦೦೦೦

ಯುಗಾದಿಯ ಸಂದೇಶ

೧

ಕಂದ || ಶುಭಕೃತು ಸಂವತ್ಸರದೊಳ್ |
ಪ್ರಭುವಿನ ಕೃಪೆಯಿಂದೆ ಸುಖದಿ ಬಾಳ್ವರ್ ಸಕಲರ್ ||
ವಿಭುದರ್ ಸಂಪದವಾನುತೆ |
ಯುಭವೃದ್ಧಿಯನಾಂಶು ಮೋದದಿಂದಿರುತಿರ್ಪರ್ ||

೨

ಹೊಸ ವರ್ಷಂ ಬರುತಿರ್ಪುದು |
ದಿಸೆದಿಸೆಯುಂ ಕಾಂತಿಗೊಳಿಸಿ ಚೈತ್ರಾಗವದೊಳ್ ||
ವಸುಧೆಯು ನಂದನಮೆನಿಸುತೆ |
ಲಸಿಕರ್ ನಲಿದಾಡುವಂತೆ ಸಂಭ್ರಮದಿಂದವು ||

೩

ಯುಗ ಯುಗ ಮುರಳುತ್ತಿರುವುದು |
ಜಗದೀಶನ ಸಂಜ್ಞೆ ಯಂತೆ ವಿಶ್ವಂಭರೆಯೊಳ್ ||
ಯುಗದಾದಿ ತತ್ವವಾದನ್ |
ಜಗದೊಳ್ ' ಭವಮಾಲೆ ' ಯಳಿದು ಧನ್ಯನೆನಿಪ್ಪನ್ ||

[ಕನ್ನಡನುಡಿ]

ನಾಳೆ ಶ್ರೀರಾಮನವಮಿ ಮತ್ತು ಸೌರಮಾನ ಯುಗಾದಿ ಪ್ರಯುಕ್ತ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ.

SHAKTI SUDHA

A Superb Tonic

ವುಡ್‌ಲ್ಯಾಂಡ್ ಮಹೋನ್ನತ 9 ನೇ ವಾರ

ಜಂಗ್ಲಿ (ಹಿಂದಿ) Junglee

ನಟನಟಿಯರ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಆಮೋಘ 3 ನೇ ವಾರ

ಶಾರದ (ತಮಿಳು)

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್
ಸಾರಂಗಪಾಣಿ, ಎಂ ವಿ ರಾಜಮ್ಮ ಸಂಧ್ಯ, ಮುತ್ತುಲಕ್ಷ್ಮಿ

[ದಿನವಹಿ 3 ಆಟಗಳು]

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು



— — Emergency Nuclear Power Plant — —

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.